ನ್ಯೂನತೆಯೊಂದಿಗೆ ಜನಿಸುತ್ತಿದ್ದಾರೆ. ಇಲ್ಲಿ ನಡೆಯುತ್ತಿರುವ ಯುರೇನಿಯಂ ಗಣಿಗಾರಿಕೆಯಿಂದ ಏಳುವ ದೂಳು, ಬಿಡುಗಡೆಯಾಗುವ ರೆಡಾನ್ ಅನಿಲ ಮಕ್ಕಳ ಆರೋಗ್ಯವನ್ನು ಬಲಿ ತೆಗೆದುಕೊಳ್ಳುತ್ತಿದೆ. ತೆರೆದ ಲಾರಿಗಳಲ್ಲಿ ಯುರೇನಿಯಂ ಅದಿರನ್ನು ಸಾಗಿಸುವಾಗ ಏರು ತಗ್ಗಿನ ರಸ್ತೆಗಳಲ್ಲಿ ಲಾರಿಯ ಕುಲುಕಾಟಕ್ಕೆ ನೆಲಕ್ಕೆ ಬೀಳುವ ಅದಿರು ಕ್ರಮೇಣ ಜಮೀನು, ನೀರು ಸೇರಿ ವಿಕಿರಣ ಜನರ ಬದುಕನ್ನೇ ನಾಶ ಮಾಡುತ್ತಿದೆ. ಸುತ್ತಲಿನ ಕೆರೆ ಕಟ್ಟೆ, ಕೊಳವೆ ಬಾವಿಗಳ ನೀರು ವಿಕಿರಣದಿಂದ ಮಲಿನಗೊಳ್ಳುತ್ತಿದೆ. ಒಂದು ಕಾಲಕ್ಕೆ ದಟ್ಟ ಹಸಿರು, ಕಾಡುಪ್ರಾಣಿಗಳ ಆವಾಸವೆನಿಸಿದ್ದ ಜಾದೂಗೋಡ ಈಗ ಪರಮಾಣು ತ್ಯಾಜ್ಯ ಭರಿಸುವ ಸ್ಮಶಾನವೆನಿಸಿದೆ.

## ಪರಮಾಣು ವಿದ್ಯುತ್ ಕ್ಷೇತ್ರಕ್ಕೆ ಖಾಸಗಿ ಪ್ರವೇಶ

ಈ ದಶಕದ ಕೊನೆಗೆ ಐದು ಲಕ್ಷ ಮೆಗಾ ವ್ಯಾಟ್ ಇಂಗಾಲಮುಕ್ತ ಇಂಧನ ಉತ್ಪಾದಿಸುತ್ತೇವೆ ಎಂದು 'ಗ್ಲಾಸ್ಗೋ ಶೃಂಗಸಭೆ'ಯಲ್ಲಿ ಭಾರತವು ಪ್ರತಿಜ್ಞೆ ಮಾಡಿದ್ದು ನೆನಪಿದೆಯೇ? ಅದನ್ನು ಸಾಧಿಸಲು ಕೇಂದ್ರ ಸರ್ಕಾರವು ಪರಮಾಣು ವಿದ್ಯುತ್ ಉತ್ಪಾದನೆಯ ಅವಕಾಶವನ್ನು ಖಾಸಗಿ ಕ್ಷೇತ್ರಕ್ಕೂ ವಿಸ್ತರಿಸಲು ಮುಂದಾಗಿದೆ. ಅದಕ್ಕಾಗಿ ಜಾರಿಯಲ್ಲಿರುವ ಅಣುಶಕ್ತಿ ಕಾಯಿದೆಗಳಿಗೆ ತಿದ್ದುಪಡಿ ಮಾಡಲು ಹೊರಟಿದೆ. ಅದರಿಂದಾಗಿ ಇದುವರೆಗೂ ಸರ್ಕಾರಿ ಸ್ವಾಮ್ಯದ ಉದ್ಯಮಗಳಿಗೆ ಸೀಮಿತವಾಗಿದ್ದ ಅಣು ವಿದ್ಯುತ್ ಉತ್ಪಾದನೆಯ ಅವಕಾಶ ಇನ್ನು ಮುಂದೆ ಖಾಸಗಿಯವರಿಗೂ ಸಿಗಲಿದೆ.

ಈ ಸುದ್ದಿಯ ಬೆನ್ನಲ್ಲೇ ಪರಮಾಣು ವಿದ್ಯುತ್ ಉತ್ಪಾದನೆಯಂತಹ ಅತಿ ಸೂಕ್ಷ್ಮ ಮತ್ತು ಅಪಾಯಕಾರಿ ಎಂದೇ ಭಾವಿಸಲಾಗಿರುವ ಉದ್ಯಮದಲ್ಲಿ ಖಾಸಗಿಯವರ ಪ್ರವೇಶವಾದರೆ ದೇಶದ ಭದ್ರತೆಗೆ ಧಕ್ಕೆಯಾಗುವುದಿಲ್ಲವೇ? ಈಗಾಗಲೇ ಬಿಸಿಲು, ಗಾಳಿ ಮತ್ತು ಬಯೋಮಾಸ್‌ಗಳಿಂದ 175000 ಮೆ.ವ್ಯಾ. ಇಂಗಾಲಮುಕ್ತ ಶಕ್ತಿಯನ್ನು ಸಂಪಾದಿಸುವ ಕೆಲಸ ಚೆನ್ನಾಗಿ ನಡೆದಿರುವಾಗ ಪರಮಾಣು ವಿದ್ಯುತ್ತಿನ ಗೊಡವೆ ಏಕೆ ಎಂಬ ಪ್ರಶ್ನೆಗಳು ಎದ್ದಿವೆ.

ಖಾಸಗಿಯವರನ್ನು ಈ ಕ್ಷೇತ್ರಕ್ಕೆ ಬರಮಾಡಿಕೊಳ್ಳುವ ವಿಚಾರ ಹೊಸದೇನಲ್ಲ. ನೀತಿ ಆಯೋಗ ಮತ್ತು ಅಣುಶಕ್ತಿ ಇಲಾಖೆಗಳ ಕಳೆದ ವರ್ಷದ ವರದಿಯಲ್ಲಿ ಈ ವಿಚಾರ ಪ್ರಸ್ತಾಪವಾಗಿತ್ತು. ಅದಕ್ಕಾಗಿ ಪರಮಾಣು ಶಕ್ತಿ ಕಾಯ್ದೆ (ಅಟಾಮಿಕ್ ಎನರ್ಜಿ ಆಕ್ಟ್) ಮತ್ತು ಪರಮಾಣು ಹಾನಿಗೆ ನಾಗರಿಕ ಹೊಣೆಗಾರಿಕೆ (ಸಿವಿಲ್ ಲಯಬಿಲಿಟಿ ನ್ಯೂಕ್ಲಿಯರ್ ಡ್ಯಾಮೇಜ್ – ಸಿಎಲ್ಎನ್‌ಡಿ) ಮಸೂದೆಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಖಾಸಗಿ ಉದ್ದಿಮೆದಾರರಿಗೆ ಪ್ರವೇಶ ಕಲ್ಪಿಸಲಾಗುವುದು ಎಂದಿರುವ ಕೇಂದ್ರ ಸರ್ಕಾರ ಇನ್ನು ಎಂಟು ವರ್ಷಗಳಲ್ಲಿ ದೇಶೀಯವಾಗಿ ನಿರ್ಮಿಸಲಾದ 5 ಸಣ್ಣ ಮತ್ತು ಮಧ್ಯಮ ರಿಯಾಕ್ಟರ್‌ಗಳು ಕಾರ್ಯಾರಂಭ ಮಾಡಲಿವೆ ಎಂಬ ವಿಶ್ವಾಸ ವ್ಯಕ್ತಪಡಿಸಿದೆ. ಪೂರಕವೆಂಬಂತೆ ಈ ವರ್ಷದ ಆಯವ್ಯಯದಲ್ಲಿ 20000 ಕೋಟಿ ರೂಪಾಯಿ ಕಾದಿರಿಸಿರುವ ಸರ್ಕಾರವು 2047ರ ವೇಳೆಗೆ ಕನಿಷ್ಠ 100000 ಮೆಗಾ ವ್ಯಾಟ್ ಪರಮಾಣು ವಿದ್ಯುತ್ ಶಕ್ತಿ ಉತ್ಪಾದನೆಯ ಗುರಿ ಇಟ್ಟುಕೊಂಡಿದೆ. ಈ ಕೆಲಸ ಕೇವಲ ಸರ್ಕಾರಿ ಉದ್ಯಮಗಳಿಂದ ಸಾಧ್ಯವಿಲ್ಲ. ಖಾಸಗಿ ಸಹಭಾಗಿತ್ವ ಮತ್ತು 2600 ಕೋಟಿ ಡಾಲರ್ ಬಂಡವಾಳ ಬೇಕೇ ಬೇಕು.

**ಫ್ಯಾಕ್ಟ್ ಶೀಟ್**

ಆಸ್ಟ್ರೇಲಿಯಾದಲ್ಲಿ ಯಾವುದೇ ಪರಮಾಣು ಸ್ಥಾವರಗಳಿಲ್ಲ. ಅಲ್ಲಿ ಅಣು ವಿದ್ಯುತ್ ಬಳಕೆಗೆ ನಿಷೇಧವಿದೆ. ಸಂಶೋಧನೆ ಮತ್ತು ವೈದ್ಯಕೀಯ ಚಿಕಿತ್ಸೆಗಳಿಗೆ ಮಾತ್ರ ವಿಕಿರಣ ಐಸೋಟೋಪ್‌ಗಳನ್ನು ಬಳಸಲಾಗುತ್ತದೆ.



## ಮುಗಿಸುವ ಮುನ್ನ

ದೇಶ ರಕ್ಷಣೆಯ ಭಾಗವಾಗಿ ಪರಮಾಣು ಶಕ್ತಿಯನ್ನು ಅಭಿವೃದ್ಧಿಪಡಿಸಿದರೆ ತಪ್ಪೇನಿಲ್ಲ. ಹಲವು ಕ್ಷೇತ್ರಗಳ ಸಂಶೋಧನೆ ಮತ್ತು ಕೈಗಾರಿಕೆಗಳಲ್ಲಿ ಅಣುಶಕ್ತಿಯ ಬಳಕೆಯ ಕುರಿತು ಯಾವ ಆಕ್ಷೇಪವೂ ಇಲ್ಲ. ಕೇವಲ ವಿದ್ಯುತ್ ಉತ್ಪಾದನೆಗಾಗಿ ಅತಿ ದೊಡ್ಡ ಪರಮಾಣು ಶಕ್ತಿ ಯೋಜನೆಗಳನ್ನು ಕೈಗೊಳ್ಳುವುದು ಎಷ್ಟು ಸರಿ ಎಂಬುದು ಪರಿಸರತಜ್ಞರ ಪ್ರಶ್ನೆ. ಯಾವುದೇ ಅಣುಸ್ಥಾವರದ ಸುತ್ತಮುತ್ತಲಿನ ಜನರ ಆರೋಗ್ಯ ಮೊದಲಿನಂತಿಲ್ಲ. ನೈಸರ್ಗಿಕ ವಿಕಿರಣದ ಜೊತೆ ಅಣುಸ್ಥಾವರದ ವಿಕಿರಣವು ಜೊತೆಯಾಗಿ ಸುತ್ತಲೂ ಇರುವ ಜನರ ಜೀವನ ಹಾಳಾಗಿರುವ ಅನೇಕ ದಾಖಲೆಗಳಿವೆ. ನಿವಾಸಿಗಳಲ್ಲಿ ಕ್ಯಾನ್ಸರ್, ಗಂಟು ನೋವು, ಗ್ರಂಥಿ ರೋಗಗಳು ಹೆಚ್ಚಿರುವುದು ದೃಢಪಟ್ಟಿದೆ.

ಆರ್ಥಿಕ ಹೊರೆ, ಪರಿಸರಕ್ಕೆ ಅಪಾಯ, ಜೀವಜಾಲದ ಆರೋಗ್ಯಕ್ಕೆ ಹಾನಿ ಮಾಡುವ ಪರಮಾಣು ವಿದ್ಯುತ್ತಿಗೆ ನೀಡುತ್ತಿರುವ ಪ್ರಾಮುಖ್ಯ ಸುಸ್ಥಿರ ಅಭಿವೃದ್ಧಿ ಮಾದರಿಯನ್ನು ಅಣಕಿಸುತ್ತಿದೆ. ಪರಿಸರಸ್ನೇಹಿ ವಿಧಾನಗಳ ಮೂಲಕ ವಿದ್ಯುತ್ ಉತ್ಪಾದಿಸುವ ವಿವೇಕಯುತ ಮಾದರಿಗಳು ಕೈಗೆಟುಕುತ್ತಿರುವಾಗ ಮತ್ತು ಅವುಗಳಿಂದ ಒಳ್ಳೆಯದಾಗಿರುವಾಗ ಅವುಗಳನ್ನೇ ಹೆಚ್ಚು ಸಂಖ್ಯೆಯಲ್ಲಿ ನಿರ್ಮಿಸದೆ ಅಪಾಯಕಾರಿ ಪರಮಾಣು ಸ್ಥಾವರಕ್ಕೆ ಕೈ ಹಾಕಿರುವುದು ಮುತ್ಸದ್ದಿತನವೆನಿಸುತ್ತದೆ.

ಆದರೆ ತಂತ್ರಜ್ಞಾನ, ಯಂತ್ರಗಳು ಮತ್ತು ಇಂಧನಕ್ಕೂ ಹೊರಗಿನವರನ್ನು ಅವಲಂಬಿಸಬೇಕಿದೆ. ಪರಿಸರದ ಕುರಿತಾದ ಈ ನೈಜ ಕಾಳಜಿಯನ್ನು ಅಭಿವೃದ್ಧಿಯನ್ನು ನಿರಾಕರಿಸುತ್ತಿರುವ ಹಟಮಾರಿತನ ಎಂದು ನಮ್ಮನ್ನು ಆಳುವವರು ನಿರ್ಧರಿಸಿದ್ದಾರೆ. ಈ ಮನೋಭಾವ ಬದಲಾಗದ ಹೊರತು ಸಂತುಲಿತ ಅಭಿವೃದ್ಧಿಯನ್ನು ಮರೆತು ಬಿಡುವುದೇ ಲೇಸು.

ಅಭಿವೃದ್ಧಿಯಾಗಬೇಕು ನಿಜ. ಆದರೆ ಒಬ್ಬರ ಅನ್ನ ಕಸಿದುಕೊಂಡು ಇನ್ನೊಬ್ಬರ ಹೊಟ್ಟೆ ತುಂಬಿಸುವುದು ಯಾವ ನ್ಯಾಯ? ಅಭಿವೃದ್ಧಿಯ ಧಾವಂತಕ್ಕೆ ಬಿದ್ದು ನೈಸರ್ಗಿಕವಾಗಿ ನೆಲೆ ನಿಂತಿರುವ ನದಿ, ಕಾಡು, ಶುದ್ಧ ಗಾಳಿ, ಫಲವತ್ತಾದ ಕೃಷಿನೆಲಗಳನ್ನು ಬಲಿ ಕೊಡಬೇಕೆ? ವಿದ್ಯುತ್ ಉತ್ಪಾದನೆಗೆ ಬೇರೆ ಸುರಕ್ಷಿತ ಮೂಲಗಳಿರುವಾಗ ಅಪಾಯಕಾರಿ ಪರಮಾಣು ವಿದ್ಯುತ್ ಗೊಡವೆ ನಮಗೆ ಬೇಕೆ? ಅಭಿವೃದ್ಧಿಗಾಗಿ ಅವಸರಪಟ್ಟು ಅಪಾಯವನ್ನು ಮೈಮೇಲೆ ಎಳೆದುಕೊಳ್ಳುವಂತಾಗಬಾರದು. ಎಲ್ಲಕ್ಕಿಂತ ಮುಖ್ಯವಾಗಿ ಪರಮಾಣು ವಿದ್ಯುತ್ ಉತ್ಪಾದನೆಯ ಬಗೆಗೆ ಜನರಿಗೆ ಇರುವ ಭಯ, ಅನುಮಾನಗಳನ್ನು ವಿಜ್ಞಾನಿಗಳು ನಿವಾರಿಸಬೇಕು.

ಪ್ರತಿಕ್ರಿಯಿಸಿ: feedback@sudha.co.in